# ಬೆಂಗಳೂರಿನಲ್ಲಿ ಶ್ರೀಮಾತೆ ಶಾರದಾದೇವಿಯವರು



ದಕ್ಷಿಣ ಭಾರತದ ಯಾತ್ರೆ ಕೈಗೊಳ್ಳಬೇಕೆಂಬ ಭಕ್ತರ ಕೋರಿಕೆಗೆ ಶ್ರೀಮಾತೆಯವರು ಒಪ್ಪಿ ಗೋಲಾಪ್‌ಮಾ ಹಾಗೂ ಇನ್ನಿತರರೊಡನೆ ೧೯೧೧ರ ಆರಂಭದಲ್ಲಿ ಮದ್ರಾಸಿಗೆ ತಲುಪಿ ಮಧುರೈ ರಾಮೇಶ್ವರಗಳನ್ನು ದರ್ಶಿಸಿ ಅದೇ ವರ್ಷದ ಮಾರ್ಚ್ ಕೊನೆಯಲ್ಲಿ ಬೆಂಗಳೂರನ್ನು ತಲುಪಿದರು.

ಬೆಂಗಳೂರು ರಾಮಕೃಷ್ಣ ಆಶ್ರಮದಲ್ಲಿಯೇ ಶ್ರೀಮಾತೆಯವರಿಗೆ ವಸತಿಯ ವ್ಯವಸ್ಥೆ ಮಾಡಲಾಗಿತ್ತು. ಶ್ರೀಮಾತೆಯವರ ಆಗಮನದ ವಾರ್ತೆ ಹರಡಿದಂತೆಲ್ಲ ತಂಡೋಪತಂಡವಾಗಿ ಭಕ್ತರು ಅವರ ದರ್ಶನಕ್ಕೆ ಬರತೊಡಗಿದರು. ಅವರು ಪುಷ್ಪಾಂಜಲಿ ಅರ್ಪಿಸಲು ತಂದ ಹೂವು ರಾಶಿ ರಾಶಿ ಬಿದ್ದಿರುತ್ತಿತ್ತು.

ಶ್ರೀಮಾತೆಯವರು ಬೆಂಗಳೂರಿನಲ್ಲಿ ಒಂದು ವಾರ ಇದ್ದರು. ಒಂದು ದಿನ ಮಧ್ಯಾಹ್ನ ಸ್ವಾಮಿ ವಿಶುದ್ಧಾನಂದರು ಅವರನ್ನು ಗವೀಪುರ ದೇವಸ್ಥಾನಕ್ಕೆ ಗಾಡಿಯಲ್ಲಿ ಕರೆದುಕೊಂಡು ಹೋದರು. ದೇವಾಲಯ ಆಶ್ರಮದ ಹತ್ತಿರವೇ ಇದ್ದುದರಿಂದ ಬೇಗನೆ ಹಿಂದಿರುಗಿದರು. ಹೊರಡುವಾಗ ಆಶ್ರಮದಲ್ಲಿ ಭಕ್ತರಾರೂ ಇರಲಿಲ್ಲ, ಆದರೆ ಹಿಂದಿರುಗುವಾಗ ಆಶ್ರಮ ಭಕ್ತರಿಂದ ಕಿಕ್ಕಿರಿದಿತ್ತು. ಶ್ರೀಮಾತೆಯವರ ಗಾಡಿಯ ಶಬ್ದ ಕೇಳಿದಾಕ್ಷಣ ಎಲ್ಲರೂ ಭಕ್ತಿಯಿಂದ ಎದ್ದುನಿಂತರು. ಅವರು ಗಾಡಿಯಿಂದ ಕೆಳಗಿಳಿಯುತ್ತಲೇ ಎಲ್ಲರೂ ನೆಲದ ಮೇಲೆ ಸಾಷ್ಟಾಂಗವೆರಗಿದರು. ಶ್ರೀಮಾತೆಯವರು ಆ ದೃಶ್ಯವನ್ನು ನೋಡಿ ಭಾವಾವಿಷ್ಟರಾಗಿ ಹಾಗೆಯೇ ಐದು ನಿಮಿಷ ನಿಂತುಬಿಟ್ಟರು, ಅವರ ಬಲಗೈ ಅಭಯಮುದ್ರೆಯಲ್ಲಿ. ಸುತ್ತಲೂ ನೀರವತೆ, ಗಂಭೀರ ವಾತಾವರಣ. ಆ ಅಪೂರ್ವ ಶಾಂತಿಯನ್ನು ಭಂಗಮಾಡುವ ಧೈರ್ಯ ಯಾರಿಗೂ ಇರಲಿಲ್ಲ. ಅನಂತರ ಶ್ರೀಮಾತೆಯವರೇ ಮೆತ್ತಗೆ ಹೋಗಿ ಆಶ್ರಮದ ಮಧ್ಯದ ಕೊಠಡಿಯಲ್ಲಿ ಕುಳಿತರು, ಭಕ್ತರೆಲ್ಲರೂ ಅಲ್ಲಿ ಬಂದು ನೆರೆದರು. ಇಲ್ಲಿಯೂ ಅದೇ ಮೂಕ ಸಂಭಾಷಣೆ—ಪ್ರೀತಿ-ಭಕ್ತಿಗಳ ವಿನಿಮಯಕ್ಕೆ ಯಾವ ಭಾಷೆಯೂ ಬೇಕಾಗಲಿಲ್ಲ. ಸ್ವಲ್ಪ ಹೊತ್ತಾದ ಮೇಲೆ ಆ ನಿಬಿಡ ನೀರವತೆಯಲ್ಲಿ ಮಧುರ ಧ್ವನಿಯೊಂದು ಕೇಳಿಸಿತು—ಶ್ರೀಮಾತೆಯವರು ತಮ್ಮ ಪಕ್ಕದಲ್ಲಿ ನಿಂತಿದ್ದ ಸ್ವಾಮಿ ವಿಶುದ್ಧಾನಂದರನ್ನು ಕುರಿತು ಹೇಳಿದರು: "ಅವರ ಭಾಷೆ ನನಗೆ ತಿಳಿಯದು; ಎರಡು ಮಾತು ಆಡುವಂತಾಗಿದ್ದರೆ ಅವರಿಗೆ ಎಷ್ಟೋ ಶಾಂತಿ ದೊರೆಯುತ್ತಿತ್ತು.' ವಿಶುದ್ಧಾನಂದರು ಇದನ್ನು ಇಂಗ್ಲಿಷಿಗೆ ಭಾಷಾಂತರಿಸಿ ಹೇಳಲು ಭಕ್ತರು ಹೇಳಿದರು: "ಇಲ್ಲ, ಇಲ್ಲ. ಅವರ ದರ್ಶನ ಹಾಗೂ ಸಾನ್ನಿಧ್ಯದಿಂದಲೇ ನಮ್ಮ ಹೃದಯ ಆನಂದದಿಂದ ತುಂಬಿಹೋಗಿದೆ. ಇಂತಹ ಸಂದರ್ಭದಲ್ಲಿ ಮಾತಿನ ಆವಶ್ಯಕತೆ ಇಲ್ಲ." ರವಿಕಿರಣ ತಾವರೆಯನ್ನು ಅರಳಿಸುವಾಗ ಅಲ್ಲಿ ಯಾವ ಭಾಷೆಯೂ ಕೆಲಸ ಮಾಡದು.

ಆಶ್ರಮದ ಹಿಂಭಾಗದಲ್ಲಿ ಒಂದು ಕಲ್ಲುಗುಡ್ಡವಿದೆ. ಒಂದು ದಿನ ಸಂಜೆ ಶ್ರೀಮಾತೆಯವರು ಇನ್ನಿಬ್ಬರು ಸಂಗಾತಿಗಳೊಡನೆ ಆ ಗುಡ್ಡದ ಮೇಲೆ ಹೋಗಿ ಸೂರ್ಯಾಸ್ತವನ್ನು ನೋಡುತ್ತ ಕುಳಿತಿದ್ದರು. ಸ್ವಾಮಿ ರಾಮಕೃಷ್ಣಾನಂದರಿಗೆ ಈ ವಿಷಯ ತಿಳಿಯಲು ಸಕೌತುಕರಾಗಿ "ಏನು? ಶ್ರೀಮಾತೆ ಪರ್ವತವಾಸಿನಿಯಾದರೆ!" ಎಂದು ಹೇಳಿ ಕೂಡಲೇ ಆ ಸ್ಥಳಕ್ಕೆ ಹೋದರು. ಶ್ರೀಮಾತೆಯವರ ಪಾದಗಳ ಮೇಲೆ ತಮ್ಮ ತಲೆಯನ್ನಿರಿಸಿ "**ಸರ್ವಮಂಗಲ ಮಾಂಗಲ್ಯೇ....**" ಇತ್ಯಾದಿ ಸ್ತೋತ್ರಗಳನ್ನು ಭಕ್ತಿಪೂರ್ವಕವಾಗಿ ಹೇಳತೊಡಗಿದರು. ಮತ್ತೆ "ಕೃಪಾ, ಕೃಪಾ" ಎಂದು ವ್ಯಾಕುಲತೆಯಿಂದ ಪ್ರಾರ್ಥಿಸಿದರು. ಚಿಕ್ಕ ಮಗುವನ್ನು ಸಂತೈಸುವಂತೆ ಶ್ರೀಮಾತೆಯವರು ಅವರ ತಲೆಯನ್ನು ನೇವರಿಸಿದರು. ಶ್ರೀಮಾತೆಯವರು ಆ ಗುಡ್ಡದ ಮೇಲೆ ಕುಳಿತು ಧ್ಯಾನ-ಜಪ ಮಾಡುತ್ತಿದ್ದರು. ಈಗ ಅದು ತೀರ್ಥಸ್ಥಾನವಾಗಿದೆ. ( *ಮೇಲಿನ ಚಿತ್ರ ಆ ಜಾಗದ್ದು* ) ❖